

ಕೋರ್ಟು ಡಿವೋರ್ಸು ಮಂಜೂರು ಮಾಡಿತು. ಅವಳು ಗಂಟು ಮೂಟೆ ಕಟ್ಟಿಕೊಂಡು ಪುಟ್ಟ ಮಗಳೊಡನೆ ಯು.ಎಸ್‌ಗೆ ಹಾರಿ ಬಿಟ್ಟಳು. ನಾನು ಮೂರು ದಿನ ಅನ್ನ ನೀರಿಲ್ಲದೆ ಕಳೆದೆ. ಆಮೇಲೆ – ಇವಳಿಲ್ಲದೆ ಬದುಕಲು ಸಾಧ್ಯ ಎಂಬುದನ್ನು ತೋರಿಸಿಕೊಡಲು ನಿರ್ಧರಿಸಿದೆ. ಹ್ಯಾಲಿಫ್ಯಾಕ್ಸಿನಲ್ಲಿ ಮನೆ ಮಾಡಿ ಹೋಮಿಯೋಪತಿ ಪ್ರಾಕ್ಟೀಸು ಆರಂಭಿಸಿದೆ."

"ಹಾಗಾದರೆ ಈಗ ನಿಮ್ಮೊಡನೆ ಇರುವವರು ಯಾರು?"

"ಸ್ವಲ್ಪ ತಾಳಿಕೋ ಜಂಟಲ್‌ಮ್ಯಾನ್. ನನ್ನನ್ನು ವಿಚಾರಿಸಲು ಪದೇಪದೇ ಮನೆಗೆ ಬರುತ್ತಿದ್ದರಲ್ಲಾ ಸ್ಕಾಟ್‌ಲೆಂಡ್‌ಯಾರ್ಡ್ ಪೊಲೀಸರು? ಅವರು ಟಾರ್ಚರ್ ಚೇಂಬರಿಗೆ ಕರಕೊಂಡು ಹೋಗಿ ಚಿತ್ರಹಿಂಸೆ ಕೊಡುತ್ತಿದ್ದರು. ನನ್ನ ಮಿದುಳಲ್ಲಿ ರಹಸ್ಯಗಳು ಅಡಗಿರಬಹುದೆಂದು ಮಿದುಳಿನ ಕೋಶಗಳನ್ನು ಶಾಕ್ ಕೊಟ್ಟು ಸುಟ್ಟು ಹಾಕುತ್ತಿದ್ದರು. ನಾನು ಇಷ್ಟೆಲ್ಲಾ ಅನುಭವಿಸುತ್ತಿರುವುದು ನನ್ನ ಮಾತೃಭೂಮಿಗಾಗಿ ಎಂಬ ಭಾವದಿಂದ ಎಲ್ಲಾ ಶಿಕ್ಷೆ ಅನುಭವಿಸಿದೆ."

"ನೀವು ಗ್ರೇಟ್ ಸರ್. ನಿಮ್ಮಿಂದಾಗಿ ಇಂಡಿಯನ್ ಗವರ್ನಮೆಂಟಿಗೆ ಲಾಸ್ ಆಗುವುದು ತಪ್ಪಿತಲ್ಲಾ."

"ಹಾಗಾಗುತ್ತಿದ್ದರೆ ನಾನು ಅನುಭವಿಸಿದ ನೋವಿಗೆ ಒಂದು ಅರ್ಥವಿರುತ್ತಿತ್ತು. ಬದಲಾಗಿ ನನ್ನ ಮನೆ ವಿಳಾಸಕ್ಕೆ ಭಾರತ ಸರಕಾರದಿಂದ ಆರು ತಿಂಗಳಾದ ಮೇಲೆ ಒಂದು ಪತ್ರ ಬಂತು. ಅದರಲ್ಲಿ ಈ ಬಗ್ಗೆ ಸಾಕ್ಷ್ಯಾಧಾರಗಳಿದ್ದರೆ ಪರಿಶೀಲಿಸಲಾಗುವುದು – ಎಂದಿತ್ತು. ಅಷ್ಟು ಹೊತ್ತಿಗಾಗಲೇ ಹೊಸ ಕಸ್ಟಮ್ಸ್ ನೀತಿ ಜಾರಿಯಾಗಿ ಭಾರತ ಸರಕಾರಕ್ಕೆ ಕೋಟಿಗಟ್ಟಲೆ ನಷ್ಟವಾಗಿತ್ತು. ಸ್ಕಾಟ್‌ಲೆಂಡ್‌ಯಾರ್ಡ್ ಪೊಲೀಸರು ಚಿತ್ರಹಿಂಸೆ ಕೊಡುವಾಗಲೆಲ್ಲಾ ಅವಡುಗಚ್ಚಿ ಸಹಿಸುತ್ತಿದ್ದ ನಾನು ಭಾರತ ಸರಕಾರದ ಪತ್ರ ಬಂದಾಗ ಅತ್ತು ಬಿಟ್ಟೆ."

ಡಾ. ಸೋನಿಪತ್ ಮಾತು ನಿಲ್ಲಿಸಿದರು. ಜೇಬಿನಿಂದ ಸಿಗಾರ್ ತೆಗೆದು ಲೈಟರಿನಿಂದ ಉರಿಸಿ ಎರಡು ದಮ್ಮು ಎಳೆದು ಸುಧಾರಿಸಿಕೊಂಡರು.

"ಅಂದು ನಾನು ಏಕಾಕಿ ಎಂಬ ಭಾವ ಮೂಡಿ ಹ್ಯಾಲಿಫ್ಯಾಕ್ಸಿನಿಂದ ಲಂಡನ್ನಿಗೆ ಹೋದೆ. ಭರ್ತಿ ಎರಡು ನೂರು ಮೈಲಿಗಳು. ನನ್ನದೇ ಕಾರು, ನಾನೇ ಓಡಿಸಿದ್ದು, ಲಂಡನ್ ಗುರುದ್ವಾರದಲ್ಲಿ ಒಂದು ಸಭೆ ನಡೆಯುತ್ತಿತ್ತು. ಸೇರಿದ್ದವರೆಲ್ಲಾ ಸಿಖ್ಖರೇ. ಗುರುದ್ವಾರದವರಿಗೆ ನನ್ನ ಪರಿಚಯ ಮೊದಲೇ ಇದ್ದುದರಿಂದ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿತು. ಅವರು ಚರ್ಚಿಸುತ್ತಿದ್ದ ವಿಷಯ ಯಾವುದು ಗೊತ್ತಾ? ಅಮೃತಸರದ ಸ್ವರ್ಣ ಮಂದಿರದ ಅಕಾಲಿತಖ್ತನ್ನು ಬಿಂದ್ರನ್‌ವಾಲೆ ಎಂಬಾತ ತನ್ನ ವಾಸಸ್ಥಳವನ್ನಾಗಿ ಮಾಡಿ, ಅಪವಿತ್ರಗೊಳಿಸಿ ಅನೇಕ ಸಾವಿರ ಮಂದಿಗಳ ಕಗ್ಗೊಲೆಗೆ ಕಾರಣನಾದನಲ್ಲಾ? ಅವನು ಸಿಖ್ಖರಿಗಾಗಿ ಖಲಿಸ್ತಾನ್ ಎಂಬ ಪ್ರತ್ಯೇಕ ದೇಶವೊಂದನ್ನು ಕಟ್ಟಲು ಯತ್ನಿಸುತ್ತಿದ್ದವನು. ಅವನ ಪ್ರಚೋದನೆಯಿಂದ ಖಲಿಸ್ತಾನವಾದಿಗಳು ಹಿಂದೂಗಳನ್ನು